ಹೆದರುವ ಅಥವಾ ಚಿಂತಿಸುವುದಕ್ಕೆ ದೊಡ್ಡ ಕಾರಣವೇನಿಲ್ಲವೆಂದು ಅವನಿಗೆ ಅನ್ನಿಸಿತು.

ಈಗ ಅವನು ಸಹಜಾವಸ್ಥೆಗೆ ಬರಲಾರಂಭಿಸಿದ; ದೀರ್ಘವಾಗಿ ಉಸಿರಾಡಿದ. ಮುಂದಿದ್ದ ಸೂಟ್‌ಕೇಸಿನ ಮೇಲೆ ಎರಡೂ ಕಾಲುಗಳನ್ನಿಟ್ಟು ಕೂತ. ಗುಪ್ತ ಜೇಬಿನ ಮೇಲಿದ್ದ ಕೈ ದೂರಕ್ಕೆ ಸರಿಯಿತು. ಅವನ ಮುಖದಲ್ಲಿ ಮಂದ ಮುಗುಳ್ನಗೆ ಮೂಡಿತು.

'ಸಾರ್, ನೀವು ವಿದೇಶಕ್ಕೆ ಹೋಗುವ ನಿಲ್ದಾಣಕ್ಕೆ ಹೋಗಬೇಕೋ ಅಥವಾ ದೇಶಿ ನಿಲ್ದಾಣಕ್ಕೆ ಹೋಗಬೇಕೋ?' ಅಕಸ್ಮಾತ್ ಚಾಲಕನ ಮಾತಿನಿಂದ ಅವನು ವಾಸ್ತವ ಲೋಕಕ್ಕೆ ಇಳಿದ. ಅವನು ಕಣ್ಣುಗಳನ್ನು ತೆರೆದು ನೋಡಿದ. ತಾನೇನು ಕೇಳುತ್ತಿದ್ದೇನೆಂದು ಅವನಿಗೆ ಅರ್ಥವಾಗಲಿಲ್ಲ. ಅವನು ಚಾಲಕನನ್ನು ದುರುಗುಟ್ಟಿ ನೋಡಿದ. ಚಾಲಕ ಮತ್ತೆ ಕೇಳಿದ, 'ಸಾರ್, ವಿದೇಶಿ ನಿಲ್ದಾಣಕ್ಕೆ ಹೋಗಬೇಕೋ, ದೇಶಿ ನಿಲ್ದಾಣಕ್ಕೆ ಹೋಗಬೇಕೋ?' ಈಗ ಅವನಿಗೆ ಚಾಲಕನ ಮಾತು ಅರ್ಥವಾಯಿತು. ವಿದೇಶಿ ಅಂದರೆ ಇಂಟರ್‌ನ್ಯಾಶನಲ್ ಏರ್‌ಪೋರ್ಟ್, ದೇಶಿ ಅಂದರೆ ನ್ಯಾಶನಲ್ ಏರ್‌ಪೋರ್ಟ್. ಅಹಮದಾಬಾದಿನಲ್ಲಿ ಇಂಟರ್‌ನ್ಯಾಶನಲ್ ಏರ್‌ಪೋರ್ಟ್ ಮೊದಲು ಬರುತ್ತದೆ, ನಂತರ ನ್ಯಾಶನಲ್ ಏರ್‌ಪೋರ್ಟ್ ಬರುತ್ತದೆ ಎಂಬುದು ನೆನಪಾಯಿತು. ಅವನು ರಿಕ್ಷಾದಿಂದ ಮುಖವನ್ನು ಹೊರ ಹಾಕಿ ನೋಡಿದ. ಎದುರಿಗೆ ಇಂಟರ್‌ನ್ಯಾಶನಲ್ ಏರ್‌ಪೋರ್ಟ್ ಕಾಣಿಸುತ್ತಿತ್ತು.

ಏನು ಉತ್ತರಿಸುವುದು? ತಿಳಿಯಲಿಲ್ಲ. ಅವನು ಅವಸರದಲ್ಲಿ, 'ನಾನು ದಿಲ್ಲಿಗೆ ಹೋಗಬೇಕು' ಎಂದಷ್ಟೇ ಹೇಳಿದ. 'ಸರಿ ಸಾರ್' ಎಂದು ಚಾಲಕ ರಿಕ್ಷಾವನ್ನು ಮುಂದಕ್ಕೆ ಚಾಲನೆ ಮಾಡಿದ. ಐದು ನಿಮಿಷದೊಳಗೆ ದೇಶಿ ನಿಲ್ದಾಣದಲ್ಲಿ ರಿಕ್ಷಾವನ್ನು ನಿಲ್ಲಿಸಿ ಹೇಳಿದ, 'ಸಾರ್, ಇಳಿಯಿರಿ. ಏರ್‌ಪೋರ್ಟ್ ಬಂತು. ತಡವಾಗಲಿಲ್ಲ ತಾನೇ, ಸಾರ್!'

ಅವನು ಕ್ಷಣಕಾಲ ಚಾಲಕನನ್ನೇ ನೋಡಿದ, ತಾನೇನು ಮಾಡಬೇಕೆಂದು ಯೋಚಿಸಿದ. ಕಡೆಗೆ ಚಾಲಕನೇ ಮತ್ತೆ ಕೇಳಿದ, 'ಸಾರ್, ತಡವಾಗಲಿಲ್ಲ ತಾನೇ?'

ಅವನು ಬಹು ಕಷ್ಟದಿಂದ 'ಇಲ್ಲ' ಎಂದು ಸೂಟ್‌ಕೇಸಿನೊಂದಿಗೆ ಕೆಳಗಿಳಿದ. ನಂತರ ಜೇಬಿಗೆ ಕೈ ಹಾಕಿ ದುಡ್ಡು ತೆಗೆದ. ಅವನ ಬಳಿ ಚಿಲ್ಲರೆ ಇರಲಿಲ್ಲ. ನೂರರ ನೋಟನ್ನೇ ಚಾಲಕನಿಗೆ ಕೊಟ್ಟ. ನಿಗದಿಯಾದ ಬಾಡಿಗೆಯನ್ನು ತೆಗೆದುಕೊಂಡು ಚಾಲಕ ಉಳಿದ ನಲವತ್ತು ರೂಪಾಯಿಗಳನ್ನು ಅವನಿಗೆ ಮರಳಿಸಿದ. ಹಣ ತೆಗೆದುಕೊಳ್ಳುವಾಗ ಮತ್ತೆ ಅವನ ಗಮನ ಚಾಲಕನ ಮೀಸೆಗಳ ಮೇಲೆ ಹರಿಯಿತು. ಮೀಸೆಗಳು ಹೆದರಿಸುವಷ್ಟು ದಟ್ಟವಾಗಿಲ್ಲವೆಂದು ಅನ್ನಿಸಿತು. ಮತ್ತೆ ಚಾಲಕನನ್ನು ನೋಡಿದ. ರಿಕ್ಷಾ ಚಾಲಕ ಕಂದು ಬಣ್ಣದ ವ್ಯಕ್ತಿಯಾಗಿದ್ದ. ಅವನ ಬಣ್ಣ ಕಪ್ಪಂತೂ ಆಗಿರಲಿಲ್ಲ. ಆದರೂ ಅವನು ರಿಕ್ಷಾ ತನ್ನೆದುರಿನಿಂದ ಕಣ್ಮರೆಯಾಗುವವರೆಗೂ ನೋಡುತ್ತಾ ನಿಂತ.


### ಸತೀಶ್ ರೋಹರಾ

ಸಿಂಧಿ ಭಾಷೆಯ ಪ್ರಮುಖ ಕವಿ, ಕತೆಗಾರ ಮತ್ತು ವಿಮರ್ಶಕರೆಂದು ಪ್ರಸಿದ್ಧರಾಗಿದ್ದಾರೆ. ಇವರಿಗೆ ಸಾಹಿತ್ಯ ಅಕಾಡೆಮಿ ಪುರಸ್ಕಾರ ಮತ್ತು ಇನ್ನಿತರ ಸಾಹಿತ್ಯಿಕ ಸಂಸ್ಥೆಗಳಿಂದ ಪುರಸ್ಕಾರಗಳು ಲಭಿಸಿವೆ.

### ಡಿ.ಎನ್. ಶ್ರೀನಾಥ್

ಕನ್ನಡ–ಹಿಂದಿ ಭಾಷೆಗಳಲ್ಲಿ ಪರಸ್ಪರ ಅನುವಾದ ಮಾಡುತ್ತಿರುವ ಶ್ರೀನಾಥರು ಇದುವರೆಗೆ 80 ಕೃತಿಗಳನ್ನು ಅನುವಾದಿಸಿದ್ದಾರೆ. ಪ್ರಸ್ತುತ ಶಿವಮೊಗ್ಗದಲ್ಲಿ ನೆಲೆಸಿದ್ದಾರೆ.